# ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ,ಮಲ್ಲೇಶ್ವರಂ,ಬೆಂಗಳೂರು-12**

ಸಂಖ್ಯೆ:ಪ.ಪೂ.ಶಿ.ಇ/ಶೈ.ಶಾ.04/ಹೆ.ಮ.ಶು.ವಿ./1/2017-18 ದಿನಾಂಕ:22-02-2018.

**ಜ್ಞಾಪನ**

ವಿಷಯ: 2017-18ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರ ಸರ್ಕಾರೇತರ ಶುಲ್ಕವನ್ನು ಲೆಕ್ಕಶೀರ್ಷಿಕೆ **"2202-02-107-3-02-103"** ಯಡಿಯಲ್ಲಿ ಅನುದಾನವನ್ನು 2ನೇ ಕಂತಿನಲ್ಲಿ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಇಡಿ 81 ಟಿಪಿಯು 2014, ದಿನಾಂಕ: 24.02.2014.

2. ಸರ್ಕಾರದ ಆದೇಶ ಸಂಖ್ಯೆ ಇಡಿ 73 ಯೋಯೋಕ 2017 ಬೆಂಗಳೂರು, ದಿನಾಂಕ: 05-01-2018.

*****

ಉಲ್ಲೇಖ (2)ರ ಸರ್ಕಾರದ ಆದೇಶದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರ ಸರ್ಕಾರೇತರ ಶುಲ್ಕ ಮರು ಪಾವತಿಗಾಗಿ ಲೆಕ್ಕ ಶೀರ್ಷಿಕೆ "2202-02-107-3-02-103(ಯೋಜನೆ)" ಅಡಿಯಲ್ಲಿ ಒಟ್ಟು 156.25 ಲಕ್ಷರೂ.ಗಳ ಅನುದಾನ ಬಿಡುಗಡೆ ಮಾಡಿಲಾಗಿದೆ. 2017-18ನೇ ಸಾಲಿಗೆ ಸಂಬಂಧಿಸಿದಂತೆ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರ (ಎಸ್‌ಸಿ/ಎಸ್‌ಟಿ/ಗ್ರೂಪ್1 ವಿದ್ಯಾರ್ಥಿನಿಯರನ್ನು ಹೊರತುಪಡಿಸಿ) ಪೂರ್ಣ ಅಂಕಿಅಂಶಗಳ ಮಾಹಿತಿಗಳನ್ನು ಇಲಾಖೆಯ ಗಣಕಶಾಖೆಯಿಂದ ಪಡೆಯಲಾಗಿದೆ. ಅದರಂತೆ ಸರ್ಕಾರೇತರ ಶುಲ್ಕ ಮರುಪಾವತಿಗಾಗಿ ಉಲ್ಲೇಖ (1)ರ ಸರ್ಕಾರಿ ಆದೇಶದಲ್ಲಿ ನಿಗದಿಪಡಿಸಿರುವ ಈ ಕೆಳಕಂಡಂತಿರುವ ಸರ್ಕಾರೇತರ ಶುಲ್ಕಗಳನ್ನು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಶುಲ್ಕ ಮರುಪಾವತಿಗಾಗಿ ಅನುದಾನ ಬಿಡುಗಡೆ ಮಾಡಬೇಕಾಗಿರುತ್ತದೆ.

| ಕ್ರಮ ಸಂಖ್ಯೆ | ಶುಲ್ಕಗಳ ವಿವರ | ಪ್ರಥಮ ಪಿಯುಸಿ | ದ್ವಿತೀಯ ಪಿಯುಸಿ |
|---|---|---|---|
| 1 | ಕ್ರೀಡಾ ಶುಲ್ಕ | 84-00 | 84-00 |
| 2 | ವಾಚನಾಲಯ ಶುಲ್ಕ | 120-00 | 120-00 |
| 3 | ಶಿಕ್ಷಕರ ಕಲ್ಯಾಣ ನಿಧಿ | 25-00 | 25-00 |
| 4 | ವಿದ್ಯಾರ್ಥಿ ಕಲ್ಯಾಣ ನಿಧಿ | 25-00 | 25-00 |
| 5 | ಪರೀಕ್ಷಾ ಶುಲ್ಕ (ಕಾಲೇಜಿನ) | 168-00 | 168-00 |
| 6 | ವಿಶೇಷ ಕ್ರೀಡಾ ಶುಲ್ಕ | 34-00 | 34-00 |
| | | 456-00 | 456-00 |

ಮೇಲೆ ವಿವರಿಸಿರುವ ಈ ಶುಲ್ಕಗಳಂತೆ, ಪ್ರತಿ ವಿದ್ಯಾರ್ಥಿನಿಗೆ ಒಟ್ಟು ರೂ456/-ರಂತೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯರಿಗೆ ನೀಡಿರುವ ಸರ್ಕಾರೇತರ ಶುಲ್ಕ ವಿನಾಯಿತಿಯನ್ನು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಮರುಪಾವತಿ ಮಾಡುವ ಸಂಬಂಧ ಅನುದಾನವನ್ನು ಈ ಕೆಳಕಂಡಂತೆ ಬಿಡುಗಡೆ ಮಾಡಲಾಗುತ್ತಿದೆ.

2017-18 ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜುಗಳಲ್ಲಿ ಸಾಮಾನ್ಯ ವರ್ಗಕ್ಕೆ ಸೇರಿದ **116245 ವಿದ್ಯಾರ್ಥಿನಿಯರ ಪೈಕಿ 17833ವಿದ್ಯಾರ್ಥಿನಿಯರಿಗೆ (ಶೇ15 ರಷ್ಟು ವಿದ್ಯಾರ್ಥಿನಿಯರ)**

ಸರ್ಕಾರದ ಲೆಕ್ಕಶೀರ್ಷಿಕೆ "2202-02-107-3-02-103(ಯೋಜನೆ)" ಅಡಿಯಲ್ಲಿ ವಿದ್ಯಾರ್ಥಿನಿಯರ ಸರ್ಕಾರೇತರ ಶುಲ್ಕವನ್ನು ಪ್ರತಿ ವಿದ್ಯಾರ್ಥಿನಿಗೆ ರೂ 456/- ರಂತೆ ಒಟ್ಟು ರೂ 81,31,848/- (ಎಂಭತ್ತೊಂದು ಲಕ್ಷ, ಎಪ್ಪತ್ತ ಮೂವತ್ತೊಂದು ಸಾವಿರದ ಎಂಟು ನೂರ ನಲ್ವತ್ತೆಂಟು ರೂಗಳನ್ನು ಮಾತ್ರ)ಗಳನ್ನು 2ನೇ ಕಂತಿನಲ್ಲಿ ಬಿಡುಗಡೆ ಮಾಡಲಾಗಿದೆ. ಅನುಬಂಧ-01ಎ ರಲ್ಲಿನ ವಿದ್ಯಾರ್ಥಿನಿಯರ ಸಂಖ್ಯೆಗೆ ಅನುಗುಣವಾಗಿ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ.

ಮುಂದುವರೆದಂತೆ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಸಾಮಾನ್ಯ ವರ್ಗಕ್ಕೆ ಸೇರಿದ ಅನುಬಂಧ-01ಎ ರಲ್ಲಿನ ವಿದ್ಯಾರ್ಥಿನಿಯರಿಗೆ (ಎಸ್‌ಸಿ/ಎಸ್.ಟಿ/ಗ್ರೂಪ್-01 ರ ವಿದ್ಯಾರ್ಥಿನಿಯರನ್ನು ಹೊರುತುಪಡಿಸಿ) ಉಲ್ಲೇಖ(2)ರಲ್ಲಿ ಸರ್ಕಾರದ ಲೆಕ್ಕಶೀರ್ಷಿಕೆ "2202-02-107-3-02-103(ಯೋಜನೆ)" ಅಡಿಯಲ್ಲಿ ಬಿಡುಗಡೆಯಾದ ಅನುದಾನ ರೂ 156.25ಲಕ್ಷಗಳಲ್ಲಿ ಶುಲ್ಕ ಮರುಪಾವತಿಗಾಗಿ ರೂ. 81,31,848/- ಗಳನ್ನು (ಎಂಭತ್ತೊಂದು ಲಕ್ಷ, ಎಪ್ಪತ್ತ ಮೂವತ್ತೊಂದು ಸಾವಿರದ ಎಂಟು ನೂರ ನಲ್ವತ್ತೆಂಟು ರೂಗಳನ್ನು ಮಾತ್ರ)ಬಿಡುಗಡೆ ಮಾಡಲಾಗಿದೆ. ಇದರೊಂದಿಗೆ ಲಗತ್ತಿಸಿರುವ ಅನುಬಂಧ -01ಎ ರಂತೆ 31 ಜಿಲ್ಲೆಯ ಉಪನಿರ್ದೇಶಕರಿಗೆ ಬಿಡುಗಡೆ ಮಾಡಲಾಗಿದೆ. ಜಿಲ್ಲಾ ಉಪ ನಿರ್ದೇಶಕರುಗಳು ಅನುಬಂಧ-01ಎರಲ್ಲಿ ತೋರಿಸಿರುವಂತೆ ಬಿಡುಗಡೆ ಮಾಡಿರುವ ಅನುದಾನವನ್ನು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಸಾಮಾನ್ಯ ವರ್ಗದ ವಿದ್ಯಾರ್ಥಿನಿಯರಿಗೆ (ಎಸ್ ಸಿ/ಎಸ್.ಟಿ/ಗ್ರೂಪ್-01 ರ ವಿದ್ಯಾರ್ಥಿನಿಯರನ್ನು ಹೊರುತುಪಡಿಸಿ), ಪ್ರಾಂಶುಪಾಲರುಗಳು ನೀಡಿರುವ ಅಂಕಿಅಂಶಗಳಿಗೆ ಅನುಗುಣವಾಗಿ ದಿನಾಂಕ 05-**03-2018** ರೊಳಗೆ ಅನುದಾನ ಬಿಡುಗಡೆ ಮಾಡಲು ಸೂಚಿಸಲಾಗಿದೆ.

ಮೇಲ್ಕಂಡಂತೆ ಬಿಡುಗಡೆ ಮಾಡಲಾದ ಅನುದಾನದಲ್ಲಿ ಆಯಾ ಜಿಲ್ಲಾ ಉಪನಿರ್ದೇಶಕರುಗಳು ಸಂಬಂಧಪಟ್ಟ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಅಗತ್ಯವಾದ ಅನುದಾನವನ್ನು ಬಿಡುಗಡೆ ಮಾಡುವುದು. ಆಯಾ ಪ್ರಾಂಶುಪಾಲರಗಳು ಕಡ್ಡಾಯವಾಗಿ ಈ ಮೊತ್ತವನ್ನು ಡಿ.ಸಿ.ಬಿಲ್ಲಿನ ಕೆ.ಎಫ್.ಸಿ. ನಮೂನೆ-5 ರಲ್ಲಿ ಚಲನ್ ಮುಖಾಂತರ ಡ್ರಾ ಮಾಡಿಕೊಳ್ಳುವುದು. ಉಪನಿರ್ದೇಶಕರು ಈ ಪ್ರಕ್ರಿಯೆಯನ್ನು ನಡೆಸುವಾಗ ಕೆಳಕಂಡ ಷರತ್ತುಗಳನ್ನು ಪಾಲಿಸತಕ್ಕದ್ದು:

1. ಸಾಮಾನ್ಯ ವಿದ್ಯಾರ್ಥಿನಿಯರಿಂದ (ಎಸ್ ಸಿ/ಎಸ್.ಟಿ/ಗ್ರೂಪ್-1 ರ ವಿದ್ಯಾರ್ಥಿನಿಯರನ್ನು ಹೊರುತುಪಡಿಸಿ) ಸರ್ಕಾರೇತರ ಯಾವುದೇ ಶುಲ್ಕಗಳನ್ನು ವಸೂಲಿ ಮಾಡಿಲ್ಲವೆಂದು ಪ್ರಾಂಶುಪಾಲರಿಂದ ದೃಢೀಕರಣ ಪತ್ರ ಪಡೆದು ಬಿಲ್ಲಿನ ಮೇಲು ಸಹಿ ಮಾಡುವುದು.
2. ಈ ಬಗ್ಗೆ ವೆಚ್ಚವನ್ನು ನಿಯಮಾನುಸಾರ ಭರಿಸಿ ಲೆಕ್ಕ ಪತ್ರವನ್ನು ನಿರ್ವಹಿಸಲಾಗುವುದು ಎಂಬ ದೃಢೀಕರಣವನ್ನು ಪ್ರಾಂಶುಪಾಲರಿಂದ ಪಡೆಯತಕ್ಕದ್ದು.
3. ***ಈ ಕೆಳಗೆ ನಮೂದಿಸಿರುವ ಅನುದಾನವನ್ನು ಕಾಲೇಜಿನ ಪ್ರಾಂಶುಪಾಲರುಗಳು ನೇರವಾಗಿ ಸಂಬಂಧಿಸಿದವರಿಗೆ ಪಾವತಿಸಲು ತಿಳಿಸಬಹುದಾಗಿದೆ.***

| ಕ್ರಮ ಸಂಖ್ಯೆ | ಶುಲ್ಕಗಳ ವಿವರ | ಪ್ರಥಮ ಪಿಯುಸಿ | ದ್ವಿತೀಯ ಪಿಯುಸಿ |
|---|---|---|---|
| 1 | ಶಿಕ್ಷಕರ ಕಲ್ಯಾಣ ನಿಧಿ (TBF) | 25-00 | 25-00 |
| 2 | ವಿದ್ಯಾರ್ಥಿ ಕಲ್ಯಾಣ ನಿಧಿ(SWF) | 10-00 | 10-00 |
| 3 | ವಿಶೇಷ ಕ್ರೀಡಾ ಶುಲ್ಕ (SSF) | 34-00 | 34-00 |
| | ಒಟ್ಟು | 69-00 | 69-00 |

ಯಾವುದೇ ಕಾರಣಕ್ಕೂ ಈ ಯೋಜನೆಯಡಿ ಬಿಡುಗಡೆಯಾದ ಹಣವನ್ನು ಲ್ಯಾಪ್ಸ್ (Lapse) ಆಗದಂತೆ ಮೇಲ್ಕಂಡ ದಿನಾಂಕದೊಳಗೆ ಡ್ರಾ ಮಾಡಲು ಸೂಕ್ತ ಕ್ರಮ ಕೈಗೊಳ್ಳುವುದು. ಮೇಲ್ಕಂಡಂತೆ ಡ್ರಾ ಮಾಡಲಾದ ಅನುದಾನ

ವಿವರವನ್ನು ಬಳಸಿದ ಬಗ್ಗೆ ಬಳಕೆ ಪ್ರಮಾಣ ಪತ್ರವನ್ನು ತಪ್ಪದೇ ದಿನಾಂಕ **08-03-2018** ರೊಳಗಾಗಿ ಜಂಟಿ ನಿರ್ದೇಶಕರು (ಶೈಕ್ಷಣಿಕ), ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012 ಇವರಿಗೆ ಕಳುಹಿಸಲು ಸೂಚಿಸಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಯವರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸಂಬಂಧಿಸಿದ ಖಜಾನಾಧಿಕಾರಿಗಳು.
5. ಲೆಕ್ಕಪತ್ರಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
6. ಸಂಬಂಧಿಸಿದ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ ಸೂಕ್ತ ಕ್ರಮಕ್ಕಾಗಿ.
7. ಇ-ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ.
8. ಕಛೇರಿ ಪ್ರತಿ.

# ಅನುಬಂಧ-01ಎ

ಸಂಖ್ಯೆಗೆ ಅನುಗುಣವಾಗಿ ಶೇ15ರಷ್ಟು ವಿದ್ಯಾರ್ಥಿನಿಯರ ಸರ್ಕಾರೇತರ ಶುಲ್ಕ ಮರುಪಾವತಿಗಾಗಿ ಅನುದಾನ ಬಿಡುಗಡೆ ಮಾಡುವ ಈ

| | District Name | I PUC | II PUC | Total no of Govt Girls pu college students | 15% ,students Strength | Toal Fees Amount | Amount to be Released |
|---|---|---|---|---|---|---|---|
| 1 | ಬೆಂಗಳೂರು-ಉತ್ತರ | 1548 | 1372 | 2920 | 438 | 456 | 199728 |
| 2 | ಬೆಂಗಳೂರು-ದಕ್ಷಿಣ | 1087 | 934 | 2487 | 769 | 456 | 350664 |
| 3 | ಬೆಂಗಳೂರು-ಗ್ರಾಮಾಂತರ | 936 | 1008 | 1944 | 292 | 456 | 133152 |
| 4 | ರಾಮನಗರ | 1639 | 1432 | 3071 | 461 | 456 | 210216 |
| 5 | ಬಳ್ಳಾರಿ | 1862 | 1114 | 2976 | 446 | 456 | 203376 |
| 6 | ಬೆಳಗಾವಿ | 3801 | 3019 | 6820 | 1023 | 456 | 466488 |
| 7 | ಬಾಗಲಕೋಟ | 2700 | 2305 | 5005 | 751 | 456 | 342456 |
| 8 | ವಿಜಾಪುರ | 1359 | 983 | 2342 | 351 | 456 | 160056 |
| 9 | ಬೀದರ | 781 | 797 | 1578 | 237 | 456 | 108072 |
| 10 | ದಾವಣಗೆರೆ | 2178 | 1921 | 4099 | 615 | 456 | 280440 |
| 11 | ಚಿತ್ರದುರ್ಗ | 1414 | 1283 | 2697 | 405 | 456 | 184680 |
| 12 | ಚಿಕ್ಕಮಂಗಳೂರು | 1761 | 1707 | 3468 | 520 | 456 | 237120 |
| 13 | ಗದಗ | 1521 | 985 | 2506 | 376 | 456 | 171456 |
| 14 | ಹಾವೇರಿ | 1555 | 1456 | 3011 | 452 | 456 | 206112 |
| 15 | ಧಾರವಾಡ | 1155 | 891 | 2046 | 307 | 456 | 139992 |
| 16 | ಗುಲ್ಬರ್ಗಾ | 2031 | 1772 | 3803 | 570 | 456 | 259920 |
| 17 | ಯಾದಗಿರಿ | 1069 | 826 | 1895 | 284 | 456 | 129504 |
| 18 | ಹಾಸನ | 3238 | 3070 | 6308 | 946 | 456 | 431376 |
| 19 | ಚಿಕ್ಕಬಳ್ಳಾಪುರ | 835 | 965 | 1800 | 270 | 456 | 123120 |
| 20 | ಕೋಲಾರ | 1704 | 1526 | 3230 | 485 | 456 | 221160 |
| 21 | ಚಾಮರಾಜನಗರ | 646 | 545 | 1191 | 179 | 456 | 81624 |
| 22 | ಮೈಸೂರು | 4289 | 4029 | 8318 | 1248 | 456 | 569088 |
| 23 | ಮಂಡ್ಯ | 3259 | 2862 | 6121 | 918 | 456 | 418608 |
| 24 | ಉತ್ತರ ಕನ್ನಡ | 2571 | 2431 | 5002 | 750 | 456 | 342000 |
| 25 | ಕೊಪ್ಪಳ | 2022 | 1580 | 3602 | 540 | 456 | 246240 |
| 26 | ರಾಯಚೂರು | 1059 | 896 | 1955 | 293 | 456 | 133608 |
| 27 | ದಕ್ಷಿಣ ಕನ್ನಡ | 2728 | 2718 | 5446 | 817 | 456 | 372552 |
| 28 | ಉಡುಪಿ | 1948 | 1915 | 3863 | 579 | 456 | 264024 |
| 29 | ಶಿವಮೊಗ್ಗ | 4126 | 3630 | 7756 | 1163 | 456 | 530328 |
| 30 | ತುಮಕೂರು | 4042 | 3665 | 7707 | 1156 | 456 | 527136 |
| 31 | ಕೊಡಗು | 681 | 597 | 1278 | 192 | 456 | 87552 |
| | | 61545 | 54234 | 116245 | 17833 | | 8131848 |

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.